ಕೊಂಡಂತಹ ಜನರು. ಹೀಗಿದ್ದರೂ ಪರಿಶಿಷ್ಟ ವರ್ಗದ ಜನರಿಗೆ ಯಾವ ರೀತಿಯಲ್ಲಿ ಏನಾಯಿತಿ ಕೊಡಬೇಕೆಂಬುದನ್ನು ಪರಿಶೀಲನೆ ಮಾಡಿದ್ದೇವೆ. ಮೊದಲನೆಯ ಮತ್ತು ಎರಡನೆಯ ವರ್ಗದ ಜನರ ಬಗ್ಗೆ ಸಹಾನುಭೂತಿಯಿಂದ ಪರಿಶೀಲನೆ ಮಾಡುವುದಕ್ಕೆ ತಯಾರಿದ್ದೇವೆ. ಆದರೆ ಮೂರನೆಯ ವರ್ಗದವರ ಬಗ್ಗೆ ಸ್ವಲ್ಪ ಕಠಿಣವಾಗಿ ನೋಡಬೇಕಾಗುತ್ತದೆ. ಇವರಲ್ಲಿ ಕೆಲವರು ದಳ್ಳಾಳಿಗಳೂ ಇದ್ದಾರೆ. ಅವುಗಳ ಬಗ್ಗೆ ಸ್ವಲ್ಪ ತೀವ್ರತೆಯಿಂದ ಕೆಲಸ ಮಾಡಬೇಕಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಈ ರೀತಿ ಎಂಟು ಸಾವಿನ ಚಿಲ್ಲರೆ ಸೈಟುಗಳನ್ನು ಖಾಯಂ ಮಾಡಿದರೆ, ಪರಿಶಿಷ್ಟ ವರ್ಗದ ಜನರಿಗೆ ನಿಯಮ ಪ್ರಕಾರ ಮತ್ತು ಕಾನೂನು ಪ್ರಕಾರ ಎಷ್ಟು ಬರಬೇಕೋ, ಅಷ್ಟು ಬಾರದೇ ಖೋತಾ ಆಗುತ್ತದೆ. ಅದನ್ನು ವೇಕಪ್ ಮಾಡಿ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ನಕರ್ನಾಟಕದ ನೀತಿ ಯಾರ್ಯಾರಿಗೆ ಸೈಟ್ ಇಲ್ಲ; ಮನೆ ಇಲ್ಲ–ಅಂಥವರಿಗೆ ಕೊಡಬೇಕೆಂದು ಇರುವುದು.

Sanction Of New Government High Schools

272. Sri G. PUTTASWAMY (Mudigere).—

Will the Minister for Education be pleased to state.—

(*a*) whether it has come to the notice of the Government that adequate funds were not allotted in the 1972–73 budget for sanctioning new Government High Schools in the State ;

(*b*) the number of Government High Schools sanctioned during last year ;

(*c*) whether it has come to the notice of the Government that number of applications are more in number in the current year than during the last year in this respect ;

(*d*) whether Government proposes to allot more funds in the current year' budget in view of number of applications received for sanction of Government high schools in the current year ?

Sri A. R. BADARINARAYANA (Minister for Education).—

(*a*) Necessary funds amounting to Rs. 14 lakhs were alloted in 1972–73 subject to the limit in the Plan budget.

(*b*) Four high schools were sanctioned during the last year (1971–72) and fourteen–high schools were sanctioned during 1972–73 ;

(*c*) There were 33 applications during last year *i e.*, 1971–72 and 29 applications during this year ;

(*d*) The question of alloting more funds does not arise as the Government have already sanctioned 14 high schools during the current year and the time is not suitable for starting new schools. The amount alloted is sufficient to meet the expenditure of the schools sanctioned.

ಶ್ರೀ ಜಿ. ಪುಟ್ಟಸ್ವಾಮಿ.—ಪ್ರೌಢ ಶಾಲೆಗಳನ್ನು ಕಟ್ಟುವಾಗ ಸರ್ಕಾರದವರು ಯಾವ ನೀತಿಯನ್ನು ಅನುಸರಿಸುತ್ತಾರೆ?

† ಶ್ರೀ ಎ. ಆರ್. ಬದರಿನಾರಾಯಣ.—ಸರ್ಕಾರದ ನೀತಿ ಏನೆಂದರೆ. ಎಲ್ಲೆಲ್ಲಿ ಜನರಿಗೆ ಹಣವನ್ನು ಕೊಡುವುದಕ್ಕೆ ಸೌಕರ್ಯವಿಲ್ಲ. ಎಲ್ಲಿ ಪ್ರೈವೇಟ್ ಮ್ಯಾನೇಜ್‌ಮೆಂಟ್ ಮುಂದಕ್ಕೆ ಬರುವುದಿಲ್ಲ ಮತ್ತು ಎಲ್ಲೆಲ್ಲಿ ಬಡವರ ಸಂಖ್ಯೆಜಾಸ್ತಿಯಾಗಿದೆ ಅಂಥ ಕಡೆಗಳಿಗೆ ಸ್ಕೂಲುಗಳನ್ನು ನೋಡಿ ಕೊಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗಿದ್ದರೆ ಅರ್ಜಿಗಳು ಬಂದ ಸಂಖ್ಯೆಗನುಸಾರವಾಗಿ ಹೈಸ್ಕೂಲುಗಳನ್ನು ಕೊಡದಿರಲು ಕಾರಣವೇನು?

ಶ್ರೀ ಆರ್. ಬದರಿನಾರಾಯಣ.—ಹೋದವರ್ಷ ನಾಲ್ಕು ಕೊಟ್ಟಿದ್ದೇವೆ. ಈ ವರ್ಷ 14 ಕೊಟ್ಟಿದ್ದೇವೆ. ಹಣದ ಕೊರತೆ ಇದ್ದುದರಿಂದ ಆ ರೀತಿ ನೋಡಿಕೊಂಡು ಕೊಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಹೈಸ್ಕೂಲು ಮಂಜೂರು ಮಾಡುವುದರಲ್ಲಿ 5 ವರ್ಷ ಸಹಾಯಧನ ಕೊಡುವುದಿಲ್ಲವೆಂದು ತೀರ್ಮಾನಮಾಡಿದುದರಿಂದ ಅನೇಕ ಕಡೆ ದುರ್ಬಲ ವರ್ಗದ ಜನರಿಗೆ ತೊಂದರೆಯಾಗಿದೆ. ಆದ್ದರಿಂದ ಆರ್ಥಿಕವಾಗಿ ಹಿಂದೂಳಿದ ಪ್ರದೇಶಗಳಲ್ಲಿ 5 ವರ್ಷದ ಬದಲು 2—3 ವರ್ಷಗಳಿಗೆ ಇಳಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

Sri A. R. BADARINARAYANA.— It is a suggestion for action.

ಶ್ರೀ ಜಿ. ಪುಟ್ಟಸ್ವಾಮಿ.— ತಾವು ಈಗಲಾದರೂ ಹೈಸ್ಕೂಲುಗಳನ್ನು ತೆಗೆಯುವುದಕ್ಕೆ ಹೆಚ್ಚು ಹಣವನ್ನು ಮಂಜೂರುಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ.—ಈಗ 1972-73 ಚಾಲ್ತಿ ವರ್ಷ ತಾವು 1973-74 ಕ್ಕೆ ಕೇಳುತ್ತೀರಾ!

MADAM SPEAKER.—Sri H. S. Siddappa is permitted to put Question No. 303 [On behalf of SRI R. PEERANNA].

Taking over of High Schools in Arsikere Taluk

303. Sri H. S. SIDDAPPA (Arasikere) [On behalf of SRI R. PEERANNA (Heggadadevanakote)].—

Will the Minister for Education be pleased to state :—

(*a*) the number of High Schools taken over by Government in Arsikere Taluk with dates of taking over ;

(*b*) the number of such schools having their own building ;

(*c*) the number of schools for which the villagers have deposited their share of contributions and given the sites ; the reasons for the delay in constructing the building for such High Schools ;

(*d*) the amount held by the Arsikere Taluk Development Board which has been deposited by the villagers for the schools ;

(*e*) the extent of land given by the villagers for each school and the dates on which it was given in each case ?